# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 66
2. ಮಾನ್ಯ ಸದಸ್ಯರ ಹೆಸರು : ಶ್ರೀ ಮುನಿರಾಜು ಗೌಡ ಪಿ.ಎಂ<br>(ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 13.02.2024
4. ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು.

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದಾಸನಪುರ ಎ.ಪಿ.ಎಂ.ಸಿ ಯಲ್ಲಿ ನಿರ್ಮಾಣ ಮಾಡಿರುವ ಮಳಿಗೆಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎಷ್ಟು ಮಳಿಗೆಗಳನ್ನು ಬಾಡಿಗೆಗೆ ನೀಡಲಾಗಿದೆ ಮತ್ತು ಎಷ್ಟು ಮಳಿಗೆಗಳು ಖಾಲಿಯಿವೆ;</td><td>ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಾಣ ಮಾಡಿರುವ/ಬಾಡಿಗೆಗೆ ನೀಡಿರುವ ಹಾಗೂ ಖಾಲಿ ಇರುವ ಮಳಿಗೆಗಳ ವಿವರ ಈ ಕೆಳಕಂಡಂತಿವೆ :-
<table>
<tr><th>ಬ್ಲಾಕ್ ವಿವರ</th><th>ನಿರ್ಮಾಣ ಮಾಡಿರುವ ಮಳಿಗೆಗಳ ಸಂಖ್ಯೆ</th><th>ಬಾಡಿಗೆ ಮೇಲೆ ಹಂಚಿಕೆ ಆಗಿರುವ ಮಳಿಗೆಗಳ ಸಂಖ್ಯೆ</th><th>ಲೀಸ್ ಕಂ ಸೇಲ್ ಮೇಲೆ ಹಂಚಿಕೆ ಯಾಗಿರುವ ಮಳಿಗೆ ಗಳ ಸಂಖ್ಯೆ</th><th>ಖಾಲಿ ಇರುವ ಮಳಿಗೆಗಳ ಸಂಖ್ಯೆ</th></tr>
<tr><td>ಎ</td><td>112</td><td>78</td><td>-</td><td>34</td></tr>
<tr><td>ಬಿ</td><td>200</td><td>128</td><td>-</td><td>72</td></tr>
<tr><td>ಸಿ</td><td>168</td><td>-</td><td>-</td><td>168</td></tr>
<tr><td>ಇ</td><td>251</td><td>54</td><td>123</td><td>74</td></tr>
<tr><td>ಒಟ್ಟು</td><td>731</td><td>383</td><td>123</td><td>348</td></tr>
</table></td></tr>
<tr><td>ಆ)</td><td>ಯಾವ ಪದಾರ್ಥಗಳ ವರ್ತಕರು ಯಶವಂತಪುರದಿಂದ ದಾಸನಪುರ ಎ.ಪಿ.ಎಂ.ಸಿ ಪ್ರಾಂಗಣಕ್ಕೆ ಸ್ಥಳಾಂತರವಾಗುವಂತೆ ಸರ್ಕಾರ ಆದೇಶಿಸಿತ್ತು;</td><td>ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಕೃಷಿ ಉತ್ಪನ್ನಗಳಲ್ಲಿ ಈರುಳ್ಳಿ, ಆಲೂಗಡ್ಡೆ, ಬೆಳ್ಳುಳ್ಳಿ ಹಾಗೂ ಶುಂಠಿ ಕೃಷಿ ಉತ್ಪನ್ನಗಳನ್ನು ಮಾತ್ರ ಮಾರಾಟ ನಿಯಂತ್ರಣ ಕಕ್ಷೆಯಿಂದ ಅಪವರ್ಜಿಸಿ, ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿನ ಎ,ಬಿ,ಸಿ ಹಾಗೂ ಡಿ ಬ್ಲಾಕ್‌ಗಳಲ್ಲಿ ಈರುಳ್ಳಿ, ಆಲೂಗಡ್ಡೆ, ಬೆಳ್ಳುಳ್ಳಿ ಹಾಗೂ ಶುಂಠಿ ಉತ್ಪನ್ನಗಳನ್ನು ಮಾತ್ರ ಮಾರಾಟ ನಿಯಂತ್ರಣಕ್ಕೆ ಒಳಪಡಿಸಲು ದಿನಾಂಕ:24/02/2023 ರಂದು ಕೇಂದ್ರ ಕಛೇರಿಯಿಂದ ಅಧಿಸೂಚನೆ ಹೊರಡಿಸಿದೆ.</td></tr>
<tr><td>ಇ)</td><td>ಹಲವು ವರ್ತಕರು ದಾಸನಪುರ ಎ.ಪಿ.ಎಂ.ಸಿ ಯಲ್ಲಿ ಮಳಿಗೆ ಪಡೆದಿದ್ದರೂ ಸಹ ಯಶವಂತಪುರದಲ್ಲಿ ಬೇರೊಬ್ಬರ ಮಳಿಗೆ ಬಾಡಿಗೆಗೆ ಪಡೆದು ವ್ಯಾಪಾರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ದಾಸನಪುರ ಉಪ ಮಾರುಕಟ್ಟೆಯಲ್ಲಿ ಮಳಿಗೆಯನ್ನು ಹಂಚಿಕೆ ಪಡೆದಿರುವ ವರ್ತಕರಿಗೆ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ ಮಳಿಗೆಗಳಲ್ಲಿ ವ್ಯಾಪಾರ ವಹಿವಾಟು ಮಾಡಲು ಸಮಿತಿಯಿಂದ ಯಾವುದೇ ರೀತಿಯ ಅವಕಾಶ ಕಲ್ಪಿಸಿರುವುದಿಲ್ಲ.</td></tr>
</table>

.....2

| | | |
|---|---|---|
| ಈ) | ಯಶವಂತಪುರದ ವರ್ತಕರನ್ನು ದಾಸನಪುರ ಎಪಿಎಂಸಿಗೆ ಸ್ಥಳಾಂತರ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? | ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ನಗರದ ಹೊರ ವಲಯದ ಹುಸ್ಕೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ದಾಸನಪುರದಲ್ಲಿ 67.25 ಎಕರೆ ಸರ್ಕಾರಿ ಜಮೀನನ್ನು ಸರ್ಕಾರದಿಂದ ಮಂಜೂರು ಮಾಡಲಾಗಿದ್ದು, ವಿವಿಧ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಸುಸಜ್ಜಿತ ಮಾರುಕಟ್ಟೆಯನ್ನು ರೂ.306.50 ಕೋಟಿಗಳ ಬೃಹತ್ ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗಿರುತ್ತದೆ.<br><br>ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004ರ ನಿಯಮ 7(2) ರಲ್ಲಿರುವ ಷರತ್ತಿಗೆ ವಿನಾಯಿತಿ ನೀಡಿ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ಈರುಳ್ಳಿ, ಆಲೂಗಡ್ಡೆ, ಬೆಳ್ಳುಳ್ಳಿ, ಶುಂಠಿ ಉತ್ಪನ್ನಗಳ ವ್ಯಾಪಾರ ವಹಿವಾಟನ್ನು ದಾಸನಪುರ ಉಪ ಮಾರುಕಟ್ಟೆ ಪ್ರಾಂಗಣಕ್ಕೆ ಸಂಪೂರ್ಣವಾಗಿ ಸ್ಥಳಾಂತರಿಸಲು ಸರ್ಕಾರದ ಆದೇಶ ಸಂಖ್ಯೆ:ಸಿಒ/292/ಎಂಆರ್‌ಇ/2022, ದಿನಾಂಕ:17/01/2023ರಲ್ಲಿ ಆದೇಶಿಸಲಾಗಿರುತ್ತದೆ.<br><br>ದಾಸನಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಿಂದ ದಾಸನಪುರ ಉಪಮಾರುಕಟ್ಟೆ ಪ್ರಾಂಗಣಕ್ಕೆ ಈರುಳ್ಳಿ, ಆಲೂಗಡ್ಡೆ, ಶುಂಠಿ ಮತ್ತು ಬೆಳ್ಳುಳ್ಳಿ ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಸಂಪೂರ್ಣವಾಗಿ ಸ್ಥಳಾಂತರಿಸುವ ನಿಟ್ಟಿನಲ್ಲಿ ದಾಸನಪುರದಲ್ಲಿ ಲಭ್ಯವಿರುವ ಮಳಿಗೆಗಳನ್ನು ಹಂಚಿಕೆ ಮಾಡಲು ಪ್ರಕಟಣೆ ಹೊರಡಿಸಲಾಗಿದ್ದು, ಸದರಿ ಪ್ರಕಟಣೆಗೆ ಹಾಗೂ ದಾಸನಪುರ ಉಪಮಾರುಕಟ್ಟೆ ಪ್ರಾಂಗಣದಲ್ಲಿ ಈರುಳ್ಳಿ, ಬೆಳ್ಳುಳ್ಳಿ, ಆಲೂಗಡ್ಡೆ, ಶುಂಠಿ ಉತ್ಪನ್ನಗಳನ್ನು ಮಾತ್ರ ನಿಯಂತ್ರಣ ಕಕ್ಷೆಗೆ ಒಳಪಡಿಸಿರುವ ಕೇಂದ್ರ ಕಛೇರಿಯ ದಿನಾಂಕ:24.02.2023ರ ಅಧಿಸೂಚನೆಯ ವಿರುದ್ಧ ವಿವಿಧ ವರ್ತಕರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ 5452/2023, 5455/2022, 4132/2023, 3221/2023, 4124/2023, 5077/2023, 4123/2023ರ ಪ್ರಕರಣಗಳನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯದ ತೀರ್ಪನ್ನು ನಿರೀಕ್ಷಿಸಲಾಗಿದೆ. |

**ಸಂಖ್ಯೆ: ಸಿಒ 44 ಎಂಆರ್‌ಇ 2024**

**(ಶಿವಾನಂದ ಎಸ್. ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು.